ಆರ್.ಎ.19/2023
**ಡಿ.ಡಬ್ಲ್ಯು 03**

ದಿನಾಂಕ: 08-08-2024 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಅರ್ಜಿದಾರ ಪರ ವಕೀಲರಾದ ಶ್ರೀ. ಎಸ್.ಕೆ.ಕೆ. ರವರಿಂದಃ-**

ನನಗೆ ಅಮರಮ್ಮ ಗೊತ್ತಿಲ್ಲ ಅವರ ಅಪ್ಪ ಗೊತ್ತು. ಅಮರಮ್ಮಳಿಗೆ ಇಬ್ಬರು ಹೆಣ್ಣು ಮಕ್ಕಳು. ಅವರೆಂದರೇ ಅಯ್ಯಮ್ಮ ಮತ್ತು ಶಿವಲಿಂಗಮ್ಮ. ಅಯ್ಯಮ್ಮನಿಗೆ ಎಷ್ಟು ಜನ ಮಕ್ಕಳು ಎಂದರೆ ಗೊತ್ತಿಲ್ಲ. ಅಯ್ಯಮ್ಮನಿಗೆ 6 ಜನ ಮಕ್ಕಳು ಎಂದರೆ ಗೊತ್ತಿಲ್ಲ. ಅವರ ಹೆಸರುಗಳು ಗೊತ್ತಿಲ್ಲ. ಶಿವಲಿಂಗಮ್ಮನಿಗೆ 4 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇದ್ದಾನೆ. ಭಾಗ ಮಾಡಿಕೊಂಡ ವಿಚಾರ ಗೊತ್ತಿಲ್ಲ ಆದರೆ ಬರೆದು ಕೊಟ್ಟಿದ್ದಾರೆ. ಆಗ ನಾನು ಇದ್ದೆ. ಆದರೆ ನಾನು ಸಹಿ ಮಾಡಿಲ್ಲ. ಯಾರು ಆ ಕಾಗದ ಬರೆದರು ನೆನಪಿಲ್ಲ. ಅಯ್ಯಮ್ಮ ಯಾವುದೇ ಆಸ್ತಿ ಬರೆದುಕೊಟ್ಟಿಲ್ಲ. ಶಿವಲಿಂಗಮ್ಮ ದಾಖಲೆ ಸೃಷ್ಟಿ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೇ ನಂ.66, 3 ಎಕರೆ 36 ಗುಂಟೆ ಶಿವಲಿಂಗಮ್ಮನ ಹೆಸರಿನಲ್ಲಿ ಇದೆ. ಸರ್ವೇ ನಂ.19 ಇದು ಕೂಡ ಶಿವಲಿಂಗಮ್ಮ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೇ ನಂ.66 ಹಿಸ್ಸಾ 5, 8 ಎಕರೆ ಇದು ಶಿವಲಿಂಗಮ್ಮನ ತಾಯಿ ಅಮರಮ್ಮನ ಹೆಸರಿನಲ್ಲಿ ಇದೆ ಎಂದರೆ ಸರಿ. ಇದರಲ್ಲಿ ಅಯ್ಯಮ್ಮನಿಗೆ ಭಾಗ ಕೊಟ್ಟಿಲ್ಲ ಎಂದರೆ ಅವಳೇ ಬಿಟ್ಟು ಹೋಗಿದ್ದಾಳೆ ಎಂದು ಹೇಳುತ್ತಾರೆ. ಇದರಲ್ಲಿಅಯ್ಯಮ್ಮಳಿಗೂ ಪಾಲು ಇದೆ ಎಂದರೆ ಸುಳ್ಳು. ಅಯ್ಯಮ್ಮನಿಗೆ ಪಾಲು ಕೊಡಬೇಕಾಗುತತದೆ ಅಂತಾ ತಪ್ಪಿಸಲು ಸುಳ್ಳ ಸಾಕ್ಷಿಃ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಲಿಂಗಮ್ಮನಿಗೆ ಎಷ್ಟು ಪಾಲು ಇದೆಯೋ ಅಷ್ಟೇ ಅಯ್ಯಮ್ಮನ ಮಕ್ಕಳಿಗೂ ಪಾಲು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಶಿವಲಿಂಗಮ್ಮ ಖರೀದಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಶಿವಲಿಂಗಮ್ಮನ ತಾಯಿಯಿಂದ ಶಿವಲಿಂಗಮ್ಮನಿಗೆ ಬಂದಿದೆ ಎಂದರೆ ಸರಿ. ಅಯ್ಯಮ್ಮನ ಮಕ್ಕಳಿಗೆ ಪಾಲು ಕೊಡಬೆಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.
ಸಹಿ

**(ಉಂಡಿ ಮಂಜುಳಾ ಶಿವಪ್ಪ )**
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.